**ದಿನಾಂಕಃ 11-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಜಿ.ಜಿ.ಜಿ. 7 ಮತ್ತು 8 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಈ ದಾವೆಯಲ್ಲಿ ನಾನು 8 ನೇ ಪ್ರತಿವಾದಿಯಾಗಿದ್ದು, ಈ ದಿನ ನಾನು ನ್ಯಾಯಾಲಯದಲ್ಲಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ ಹಾಗೂ ಅದರಲ್ಲಿರು ಸಹಿಗಳು ನನ್ನವೇ ಆಗಿರುತ್ತವೆ.

ಈ ದಾವೆಯಲ್ಲಿ ಹಾಜರು ಪಡಿಸಿದ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

ದಾವಾಸ್ತಿಗೆ ಸಂಬಂಧಪಟ್ಟ ದಿನಾಂಕಃ 01-04-1980 ರಿಂದ 31-03-1994 ರವರೆಗಿನ ಒಂದು ಕೈ ಬರವಣಿಗೆಯ ಋಣಭಾರ ರಾಹಿತ್ಯ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿಡಿ-1** ಎಂದು, ದಾವಾಸ್ತಿಗೆ ಸಂಬಂಧಪಟ್ಟ ದಿನಾಂಕಃ 01-04-2002 ರಿಂದ 31-03-2004 ರವರೆಗಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರದ ದೃಢೀಕೃತ ನಕಲನ್ನು **ನಿಡಿ-2** ಎಂದು, ದಾವಾಸ್ತಿಗೆ ಸಂಬಂಧಪಟ್ಟ ದಿನಾಂಕಃ 01-04-2004 ರಿಂದ 14-07-2022 ರವರೆಗಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರದ ದೃಢೀಕೃತ ನಕಲನ್ನು **ನಿಡಿ-3** ಎಂದು, ನಾನು ಸರ್ವೆ ನಂಬರ 81/4 ಮತ್ತು 83/1ಅ/1 ರಲ್ಲಿ ಜಮೀನುಗಳನ್ನು ದಿನಾಂಕಃ 22-12-2003 ರಂದು ಖರೀದಿ ಮಾಡಿರುವ ಬಗ್ಗೆ ನೊಂದಾಯಿತ ಖರೀದಿ ಪತ್ರದ ಮೂಲ ಪ್ರತಿಯನ್ನು **ನಿಡಿ-4** ಎಂದು, ಸದ್ರಿ ಖರೀದಿ ಪತ್ರದಲ್ಲಿ 1 ರಿಂದ 5 ನೇ ಪ್ರತಿವಾದಿಯರು ಸಹಿ ಮಾಡಿರುತ್ತಾರೆಂದು ಸಾಕ್ಷಿಯು ಅವರುಗಳ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ಸಹಿಗಳನ್ನು ಕ್ರಮವಾಗಿ

**ನಿಡಿ-4(ಎ) ರಿಂದ ನಿಡಿ-4(ಇ)** ಎಂದು ಗುರುತಿಸಲಾಯಿತು. 6 ನೇ ಪ್ರತಿವಾದಿಯು ನೀಲವ್ವ ಹೆಬ್ಬಟ್ಟಿನ ಗುರುತು ಹಾಕಿರುತ್ತಾರೆಂದು ಸಾಕ್ಷಿಯು ನುಡಿದಿರುತ್ತಾರೆ. ಕೊಟ್ರಗೌಡ ಮತ್ತು 1 ರಿಂದ 6 ನೇ ಪ್ರತಿವಾದಿಯರು ಒಪ್ಪಿಗೆ ಪತ್ರ ಬರೆದುಕೊಟ್ಟಿರುತ್ತಾರೆಂದು ಸಾಕ್ಷಿಯು ಒಪ್ಪಿಗೆ ಪತ್ರವನ್ನು ಮತ್ತು ಅದರಲ್ಲಿರುವ ಕೊಟ್ರಗೌಡ ಮತ್ತು 1 ರಿಂದ 5 ನೇ ಪ್ರತಿವಾದಿಯರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದ್ರಿ ಒಪ್ಪಿಗೆ ಪತ್ರವನ್ನು **ನಿಡಿ-5** ಎಂದು, ಕೊಟ್ರಗೌಡ ಮತ್ತು 1 ರಿಂದ 5 ನೇ ಪ್ರತಿವಾದಿಯರ ಸಹಿಗಳನ್ನು ಕ್ರಮವಾಗಿ **ನಿಡಿ-5(ಎ)** ರಿಂದ **ನಿಡಿ-5(ಎಫ್)** ಎಂದು ಗುರುತಿಸಲಾಯಿತು. ಸಾಕ್ಷಿಯು ಸದ್ರಿ ಒಪ್ಪಿಗೆ ಪತ್ರಕ್ಕೆ 6 ನೇ ಪ್ರತಿವಾದಿಯು ತನ್ನ ಹೆಬ್ಬಟ್ಟಿನ ಗುರುತನ್ನು ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ. ಸರ್ವೆ ನಂಬರ 81/4 ಕ್ಕೆ ಸಂಬಂಧಿಸಿದ ಏಳು ಪಹಣಿ ಪತ್ರಿಕೆಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿಡಿ-6** ರಿಂದ **ನಿಡಿ-12** ಎಂದು, ಸರ್ವೆ ನಂಬರ 83/1 ಅ/1 ಕ್ಕೆ ಸಂಬಂಧಿಸಿದ ಆರು ಪಹಣಿ ಪತ್ರಿಕೆಗಳ ದೃಢೀಕೃತ ನಕಲುಗಳನ್ನು ಕ್ರಮವಾಗಿ **ನಿಡಿ-13** ರಿಂದ **ನಿಡಿ-18** ಎಂದು, ದೇವಗಿರಿ-ಯಲ್ಲಾಪುರ ಗ್ರಾಮದ ಡ ನಂಬರ 1299 ರ ಉತಾರವಿನ ದೃಢೀಕೃತ ನಕಲನ್ನು **ನಿಡಿ-19** ಎಂದು, ಗ್ರಾಮದ ಡ ನಂಬರ 2034 ರ ಉತಾರವಿನ ದೃಢೀಕೃತ ನಕಲನ್ನು **ನಿಡಿ-20** ಎಂದು, ಗ್ರಾಮದ ಡ ನಂಬರ 3152 ರ ಉತಾರವಿನ ದೃಢೀಕೃತ ನಕಲನ್ನು **ನಿಡಿ-21** ಎಂದು, ಕೊಟ್ರಗೌಡರವರು ತಹಶೀಲ್ದಾರ, ಹಾವೇರಿ ಇವರಿಗೆ ಸಾಲದ ಬೋಜಾ ಕಡಿಮೆ ಮಾಡುವಂತೆ ಕೊಟ್ಟ ಅರ್ಜಿಯ ಪ್ರತಿಯನ್ನು **ನಿಡಿ-22** ಎಂದು, ಎಲ್‌ಎನ್‌ಎ-ಸಿಆರ್-139/2010-11 ರಲ್ಲಿ ಹಾವೇರಿ ಜಿಲ್ಲಾಧಿಕಾರಿಗಳರವರ ಅಧೀಕೃತ ಜ್ಞಾಪನಾ ಪತ್ರದ ದೃಢೀಕೃತ ನಕಲನ್ನು **ನಿಡಿ-23** ಎಂದು, ಎಲ್‌ಎನ್‌ಎ-ಸಿಆರ್-141/2010-11 ರಲ್ಲಿ

ಹಾವೇರಿ ಜಿಲ್ಲಾಧಿಕಾರಿಗಳರವರ ಅಧೀಕೃತ ಜ್ಞಾಪನಾ ಪತ್ರದ ದೃಢೀಕೃತ ನಕಲನ್ನು **ನಿಡಿ-24** ಎಂದು, ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು ನೀಡಿರುವ ಎರಡು ಪ್ಲಾಟ ಮ್ಯಾಪ್‌ಗಳನ್ನು ಕ್ರಮವಾಗಿ **ನಿಡಿ-25 ಮತ್ತು ನಿಡಿ-26** ಎಂದು, ದಿನಾಂಕಃ 25-10-2016 ರಂದು ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಸರ್ವೆ ನಂಬರ 81/4 ಕ್ಕೆ ಸಂಬಂಧಿಸಿದಂತೆ ನೀಡಿರುವ ಅಂತಿಮ ಅನುಮೋದನೆಯ ಪತ್ರವನ್ನು **ನಿಡಿ-27** ಎಂದು, ದಿನಾಂಕಃ 22-08-2016 ರಂದು ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಸರ್ವೆ ನಂಬರ 83/1ಅ/1 ಕ್ಕೆ ಸಂಬಂಧಿಸಿದಂತೆ ನೀಡಿರುವ ಅಂತಿಮ ಅನುಮೋದನೆಯ ಪತ್ರವನ್ನು **ನಿಡಿ-28** ಎಂದು, ಎಂ ಆರ್ ನಂ. 29/2011-12 ರ ಮ್ಯುಟೇಷನ್ ರಜಿಸ್ಟರನ ನಕಲು ಪ್ರತಿಯನ್ನು **ನಿಡಿ-29** ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಪ್ರತಿವಾದಿಯರ ಪರ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.